ಸಾಕ್ಷಿಯನ್ನು ದಿಃ **07.12.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಜೆ.ಡಿ.ಆರ್ ರವರ ಪರ ಶ್ರೀ ಜೆ..ಎಸ್.ಎನ್. ವಕೀಲರಿಂದಃ-

ಪರಿಹಾರ ಕೋರಿ ಅರ್ಜಿಯನ್ನು ನಾನು ಮತ್ತು ನನ್ನ ಮಕ್ಕಳಾದ ಮುರುಳಿ ಮತ್ತು ದಶರಥ ದಾಖಲಿಸಿದ್ದೇವು. ತಮ್ಮಯ್ಯಶೆಟ್ಟಿ ನನ್ನ ಮಾವ, ಲಕ್ಷ್ಮಮ್ಮ ನನ್ನ ಅತ್ತೆ.ಈ ಅರ್ಜಿಯಲ್ಲಿ ನನ್ನ ಮಕ್ಕಳು, ಅತ್ತೆ, ಮಾವನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ನನ್ನ ಮಗ ಮುರುಳಿಗೆ ಈಗ 30 ವರ್ಷ, ನನ್ನ ಮಗ ದಶರಥನಿಗೆ 28 ವರ್ಷ. ನಾನು ಸಲ್ಲಿಸಿದ ಅರ್ಜಿಗೆ ನನ್ನ ಮಗ ಮುರುಳಿಯನ್ನು ಹೊರತು ಪಡಿಸಿ ಬೇರೆ ಯಾರೂ ಸಹಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ನನಗಾಗಲಿ, ನನ್ನ ಮಗ ದಶರಥನಿಗಾಗಲಿ, ಅತ್ತೆ ಮಾವನಿಗಾಗಲಿ ಅಮಲ್ಜಾರಿ ಅರ್ಜಿಗೆ ಸಹಿ ಹಾಕಲು ತೊಂದರೆ ಇತ್ತೆ ಇಲ್ಲವೆ ಎಂದು ಗೊತ್ತಿಲ್ಲ. ಎದುರುದಾರರಿಗೆ ಇಂತಹ ಜಮೀನು ಇದೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದಿರಾ ಎಂದರೆ ಸಲ್ಲಿಸಿದ್ದೇನೆ. ನನ್ನ ಅರ್ಜಿಯಲ್ಲಿ ಸ್ಥಿರ ಮತ್ತು ಚರ ಆಸ್ತಿಯ ಬಗ್ಗೆ ವಿವರಗಳನ್ನು ಬರೆದಿಲ್ಲ ಎಂದರೆ ನನಗೆ ಓದಲು ಬರೆಯಲು ಬರುವುದಿಲ್ಲ. ಎದುರುದಾರರಿಗೆ ಸಂಬಂಧಿಸಿದ ಯಾವುದಾದರೂ ಆಸ್ತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಪಹಣಿ ಕೊಟ್ಟಿದ್ದೇನೆ. ಎದುರುದಾರಿರಿಗೆ ಸಂಬಂಧಿಸಿದ ಜಮೀನುಗಳ ಬಗ್ಗೆ ಯಾವುದೆ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾಖಲೆ ಹಾಜರು ಪಡಿಸದೆ ಇದ್ದರೂ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರಿಗೆ ಯಾವುದೆ ಚರ ಮತ್ತು ಸ್ಥಿರ ಆಸ್ತಿ ಇಲ್ಲ ಹಾಗೂ ಯಾವುದೆ ಆರ್ಥಿಕ ಶಕ್ತಿ ಇಲ್ಲ ಎಂದು ಸರಿಯಲ್ಲ, ಸಾಕ್ಷಿ ಮುಂದುವರೆದು ಎದುರುದಾರರು ಆಸ್ತಿಗಳನ್ನು ಬೇರೆಯವರ ಹೆಸರಿಗೆ ಮಾಡಿದ್ದಾರೆ ನಮಗೆ ದಾಖಲೆಗಳು ಸಿಗದಂತೆ ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಎದುರುದಾರರಿಗೆ ಯಾವುದೆ ಆಸ್ತಿ ಇಲ್ಲ ಮತ್ತು ಯಾವುದನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಅಮಲ್ಜಾರಿ ಅರ್ಜಿಯನ್ನು ತೋರಿಸಲಾಗಿ

ಅದರಲ್ಲಿ ತನ್ನ ಸಹಿ ಇಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ನನ್ನ 2 ನೇ ಮಗ ದಶರಥ ಸಹಿ ಹಾಕುವುದನ್ನು ನಾನು ನೋಡಿಲ್ಲ. ಸಾಕ್ಷಿಗೆ ವಕಾಲತ್ ಅನ್ನು ತೋರಿಸಲಾಗಿ ಅದರಲ್ಲಿ ದಶರಥನ ಸಹಿ ಇದೆಯೆ ಎಂದು ಕೇಳಿದಾಗ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ದಶರಥ ಸಹಿ ಹಾಕುವುದನ್ನು ನಾನು ನೋಡಿದ್ದರೂ ಕೂಡ ಆತನ ಸಹಿಯನ್ನು ಗುರುತಿಸಲಾಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಅಂಶಗಳನ್ನು ಸೃಷ್ಟಿ ಮಾಡಿಕೊಂಡು ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.